30	ಸರಕಾರಿ ಪದವಿಪೂರ್ವ ಕಾಲೇಜು ಮುನಿಯಾಲು ಬಾಲಕರಿಗಾಗಿ ಶೌಚಾಲಯ ನಿರ್ಮಾಣ	ವರಂಗ ಗ್ರಾಮ ಪಂಚಾಯತ್ ಕಾರ್ಕಳ ತಾಲ್ಲೂಕು	2.45
31	ಶಿರ್ಲಾಲು ಗ್ರಾಮದ ಕುಡಿಯುವ ನೀರಿನ ಯೋಜನೆಗೆ ಜಲಮೂಲ-ಎರೆದ ಬಾವಿ ಹಾಗೂ ರೈಸಿಂಗ್ ಮೈನ್ ಅಳವಡಿಸುವುದು	ಶಿರ್ಲಾಲು ಗ್ರಾಮ ಪಂಚಾಯತ್ ಕಾರ್ಕಳ ತಾಲ್ಲೂಕು	12
32	ಕೆರ್ವಾಶೆ ಗ್ರಾಮದ ದೊನ್ನಡ್ಕ ಪ.ಜಾ.ಕಾಲೋನಿ ಬಳಿ ಕೆರ್ವಾಶೆ ಶಿರ್ಲಾಲು ಸೇತುವೆಗೆ ಸಂಪರ್ಕ ರಸ್ತೆ ರಚನೆ	ಶಿರ್ಲಾಲು ಗ್ರಾಮ ಪಂಚಾಯತ್ ಕಾರ್ಕಳ ತಾಲ್ಲೂಕು	5
33	ನಾಡ್ವಾಲು ಗ್ರಾಮ ಪಂಚಾಯತ್ ಮೇಗದ್ದೆ ಶಾಂತಲ್ಕಕ್ಕಿ ಕಾಲು ಸಂಕ ರಚನೆ	ನಾಡ್ವಾಲು ಗ್ರಾಮ ಪಂಚಾಯತ್ ಕಾರ್ಕಳ ತಾಲ್ಲೂಕು	10
34	ನಾಡ್ವಾಲು ಗ್ರಾಮ ಪಂಚಾಯತ್ ತನ್ನೀರು ಬಾವಿ ಬಳಿ ಕಾಲು ಸಂಕದ ಸಂರಕ್ಷಣಾ ಕಾಮಗಾರಿ	ನಾಡ್ವಾಲು ಗ್ರಾಮ ಪಂಚಾಯತ್ ಕಾರ್ಕಳ ತಾಲ್ಲೂಕು	5
ಒಟ್ಟು ಕಾಮಗಾರಿಗಳು			**290.4**

ಪಶು ವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡುವುದು

527 (642) ಡಾ॥ ಉಮೇಶ್ ಜಿ. ಜಾದವ್ (ಚಿಂಚೋಳಿ) :- ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

ಅ) ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ಇರುವ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ಪಶುವೈದ್ಯಾಧಿಕಾರಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನಾ ಸಚಿವರು :-

ಅ) ಹೌದು,

ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿರುವ ಪಶುವೈದ್ಯ ಆಸ್ಪತ್ರೆಗಳಲ್ಲಿ ಪಶುವೈದ್ಯರ ಖಾಲಿ ಹುದ್ದೆಗಳ ವಿವರಗಳು ಕೆಳಕಂಡಂತಿವೆ:

ಕ್ರ.ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆ	ಭರ್ತಿ ಹುದ್ದೆ	ಖಾಲಿ ಹುದ್ದೆ
1	ಸಹಾಯಕ ನಿರ್ದೇಶಕರು	01	–	01
2	ಪಶುವೈದ್ಯಾಧಿಕಾರಿಗಳು	16	04	12

ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮುಂಬಡ್ತಿ ನೀಡುವಾಗ ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

391 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಿದ್ದು, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. ಆದ್ಯತೆ ಮೇಲೆ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.